ಹರಿದು ಹಾಕಿದ್ದರು. ಕೆಲವರಂತೂ ಅವಳ ದೇಹ ಛಿದ್ರಗೊಳಿಸಿದ್ದರು. ಈಗ ಮತ್ತೆ ಮಡಿವಂತಿಕೆ ಏಕೆ? ಅವಳು ಅಲ್ಲಿಂದ ಎದ್ದು ಮನೆಯೊಳಗೆ ಪ್ರವೇಶಿಸಿದಳು. ಬಾಗಿಲಲ್ಲಿ ನಿಂತು ತನ್ನ ಮೈಮೇಲಿನ ಎಲ್ಲ ಬಟ್ಟೆಗಳನ್ನು ಬಿಚ್ಚಿ ಹಾಕಿ ನಗ್ನಳಾದಳು.

ಅನಂತರ ಅವಳು ನೆರೆದ ಜನರಿಂದ ಬಲಾತ್ಕಾರ ಮಾಡಿಸಿಕೊಂಡಳು. ಅವಳು ಊರಿನಲ್ಲಿ ನಗ್ನಳಾಗಿ ಓಡಾಡಿದಳು. ಆ ಮುಖ್ಯ ನಟಿ ಅವಳೊಂದಿಗೇ ಮೆರವಣಿಗೆಯಲ್ಲಿ ನಡೆದು ಬರುತ್ತಿದ್ದಳು. ಆದರೆ ನಾರಾಯಣಿ ಆ ನಟಿಯ ಪರಿವೆ ಮಾಡಲಿಲ್ಲ. ಆದರೆ ಫಿಲ್ಮಿನ ಹೀರೋ ಸತ್ತು ಹೋಗಿದ್ದಾನೆಂದು ಅವಳಿಗೆ ಕಟ್ಟ ಕಡೆಗೂ ತಿಳಿಯಲಿಲ್ಲ.

ಕತ್ತಲಾದ ಬಳಿಕ ಅವರು ನಾರಾಯಣಿಯನ್ನು ಅವಳ ಮನೆಗೆ ಮುಟ್ಟಿಸಿದರು. ಹೆಣ್ಣುಮಕ್ಕಳು ನೆರೆಮನೆಗಳಿಂದ ಬಂದು ಮುತ್ತಿಗೆ ಹಾಕಿ, 'ಅಲ್ಲಿ ಏನಾಯ್ತು? ಏನ್ ಮಾಡಿದ್ರು? ಹೀರೋನೊಂದಿಗೆ ಹಾಡು ಹೇಳುತ್ತ ಕುಣಿದೆಯೇನು?' ಎಂದು ಕುತೂಹಲದಿಂದ ಕೇಳಿದರು.

ನಾರಾಯಣಿ ಸಿಡುಕುತ್ತ ಹೇಳಿದಳು: 'ಹೌದು, ನಾನು ಹೀರೋನೊಂದಿಗೆ ಕುಣಿದೆ. ಅವನು ನನ್ನನ್ನು ಬರಸೆಳೆದು ಮುತ್ತಿಕ್ಕಿದ. ಅವನು ಆ ಜನರ ಮುಂದೆಯೇ ನನ್ನೊಂದಿಗೆ ಮಲಗಿದ' ಕೊನೆಯ ಮಾತು ಆಡುವಾಗ ಅವಳ ಗಂಟಲು ಕಟ್ಟಿದಂತಾಯಿತು.

ಹೆಣ್ಣು ಮಕ್ಕಳು ಗೊಂದಲದಲ್ಲಿ ಬಿದ್ದಂತಾಗಿದ್ದರು. ಆದರೆ ನಾರಾಯಣಿ ಗಂಭೀರ ಮುಖಮುದ್ರೆ ನೋಡಿ ಮುಂದೆ ಪ್ರಶ್ನಿಸುವ ಧೈರ್ಯ ಮಾಡಲಿಲ್ಲ. ಅವರು ಮನಸ್ಸಿನಲ್ಲಿ 'ಮುಂದೆ ಸಿನಿಮಾ ಬಂದಾಗ ನೋಡೇ ನೋಡ್ತೀವಲ್ಲ' ಎಂದು ಸುಮ್ಮನಾದರು.

ಹೀಗೆಯೇ ಆರು ತಿಂಗಳು ಕಳೆದು ಹೋದವು. ನಾರಾಯಣಿ ಎಂದೂ ಆ ಚಲನಚಿತ್ರದ ಬಗ್ಗೆ ಮಾತೇ ಆಡುತ್ತಿರಲಿಲ್ಲ. ವಠಾರದಲ್ಲಿದ್ದ ಹೆಣ್ಣು ಮಕ್ಕಳೂ ಆ ಬಗ್ಗೆ ಕೇಳುತ್ತಿರಲಿಲ್ಲ.

ಒಂದು ದಿನ, ನಥುರಾಮನು ನಾರಾಯಣಿ ಹೀರೋಯಿನ್‌ಳಾಗಿ ನಟಿಸಿದ 'ನಾರಿ ಮತ್ತು ದುರ್ಗಾ' ಎಂಬ ಸಿನಿಮಾ ವೈಶಾಲಿ ಥಿಯೇಟರಿನಲ್ಲಿ ಬಿಡುಗಡೆಯಾಗಲಿದೆ ಎಂಬ ಸುದ್ದಿ ತಂದ. ಅದನ್ನು ಕೇಳಿ ನಾರಾಯಣಿಯಲ್ಲಿ ಕಳವಳ ಹೆಚ್ಚಾಯಿತು.

ಒಂದು ದಿನ ಮಧ್ಯಾಹ್ನ ಸುತ್ತಮುತ್ತಲಿನ ಹೆಂಗಳೆಯರು ಕುತೂಹಲದಿಂದ, ಉತ್ಸಾಹದಿಂದ ಸಿನಿಮಾ ನೋಡಲು ಹೋಗಲು ತಯಾರಾದರು. ನಾರಾಯಣಿ ಮಾತ್ರ ಹೋಗುವ ಉತ್ಸಾಹದಲ್ಲಿರಲಿಲ್ಲ. ಅಕ್ಕಪಕ್ಕದವರೆಲ್ಲ ಬಂದು ಒತ್ತಾಯ ಮಾಡಿದರು. ದಮ್ಮಯ್ಯ ಹಾಕಿದರೂ ನಾರಾಯಣಿ ಹೋಗಲಿಲ್ಲ. ನಿರುಪಾಯರಾಗಿ ಮಿಕ್ಕವರು ದುಬಾರಿ ಬೆಲೆಯ ಟಿಕೇಟು ಖರೀದಿಸಿ ಹೋಗಿ ಕುಳಿತುಕೊಂಡರು.

ಚಲನಚಿತ್ರ ಆರಂಭವಾಗಿ ಅರ್ಧಗಂಟೆಯಾಯಿತು, ಒಂದು ಗಂಟೆಯಾಯಿತು, ಒಂದೂವರೆ ಗಂಟೆಯಾದರೂ ಚಿತ್ರದಲ್ಲಿ ನಾರಾಯಣಿಯ ದರ್ಶನವಿಲ್ಲ. ಸೇರಿದ ಹೆಣ್ಣು ಮಕ್ಕಳು ನಾರಾಯಣಿಯ ಪಾತ್ರ ನೋಡಲು ಹೋಗಿದ್ದರೆ ವಿನಃ ಚಿತ್ರ ನೋಡಲು ಹೋಗಿರಲಿಲ್ಲ. ಅವರೆಲ್ಲ ನಾರಾಯಣಿಯ ಮುಖ, ನಟನೆ ನೋಡಲು ಕಾದಿದ್ದರು. ರಾಮೇಶ್ವರಿಯ ಮೇಲೆ ಬಲಾತ್ಕಾರ ಮಾಡಿ ಅವಳನ್ನು ನಗ್ನಗೊಳಿಸುವ ಸನ್ನಿವೇಶ ಅವರು ಕಣ್ಣಾರೆ ನೋಡಿದರು. ಆದರೆ ಅಲ್ಲಿ ನಟಿಯ ಮುಖ ಅಲ್ಲಲ್ಲಿ ಕಾಣುತ್ತಿತ್ತು. ಪೂರ್ತಿ ಚಿತ್ರ ನೋಡಿದರೂ ನಾರಾಯಣಿಯ ಮುಖ ಮಾತ್ರ ಕಾಣಿಸಲಿಲ್ಲ. ಅವಳು ಹೋದಳೆಲ್ಲಿ?

ಒಬ್ಬ ಜಾಣ ಹೆಂಗಸು ಮಾತ್ರ ಆ ದೃಶ್ಯದ ರಹಸ್ಯ ಬಿಚ್ಚಿಟ್ಟಳು. ರಾಮೇಶ್ವರಿಯನ್ನು ನಗ್ನಗೊಳಿಸಿ ಓಡಿಯಾಡಿಸುತ್ತಾರಲ್ಲ ಆ ನಗ್ನದೇಹ ರಾಮೇಶ್ವರಿಯದಲ್ಲ. ಅಂದರೆ ಮುಖ್ಯ ನಟಿಯದಲ್ಲ. ಆ ಶರೀರ ನಾರಾಯಣಿಯದು. ಸುಮ್ಮನೆ ಮಧ್ಯೆ ಮಧ್ಯೆ ನಾರಾಯಣಿಯ ಮುಖ ತೋರಿಸುತ್ತಾರೆ, ಅಷ್ಟೆ.